
ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಕೆಸರಮನೆಯಲ್ಲಿ ಮಿಂಚುಳ್ಳಿಯ ಬಾಣಂತನ

ಪಕ್ಷಿಗಳು ಸಹಜವಾಗಿ ತಮ್ಮ ಗೂಡು ನಿರ್ಮಿಸಿಕೊಳ್ಳುವ ಜಾಗವನ್ನು ಮೊದಲು ಸರ್ವೇ ನಡೆಸುತ್ತವೆ. ಸಿವಿಲ್ ಎಂಜಿನಿಯರಿಂಗ್ ತಂತ್ರಜ್ಞಾನವನ್ನು ಪ್ರಾಯಶಃ ಜಗತ್ತಿಗೆ ಕಲಿಸಿದ ಕಲಿಗಳು ಇವೇ ಇರಬೇಕು.



ಕರೋನಾ ಅಂಟುರೋಗದ ಸಮಯದಲ್ಲಿ ಮನೆಯೆಂಬುದು ಬೇಸರದ ತಿಪ್ಪೆರಾಶಿ ಎನಿಸಿತ್ತು. ಪ್ರಕೃತಿಯ ಒಡನಾಟವಿಲ್ಲದ ಮನದೊಳಗಿಂದ ವಿಕಾರಗಳು, ಸಣ್ಣತನಗಳು ಒಂದೊಂದಾಗಿ ಎದ್ದು ನಿಂತು ಹೊರಬರತೊಡಗಿದವು. ಜುಜುಬಿ ವಿಷಯಗಳಿಗೆಲ್ಲಾ ಸಿಟ್ಟಾಗುವಷ್ಟು ಪುರುಸೊತ್ತು ಬೇರೆ ಸಿಕ್ಕಿತ್ತು. ಹೀಗಾಗಿ ಮಗ, ಮಗಳು, ಹೆಂಡತಿ ಜೊತೆ ಚಿಲ್ಲರೆ ಸಂಗತಿಗಳಿಗೆ ಜಗಳವಾಡಿಕೊಂಡು ಮಾತೇ ಬಿಟ್ಟಿದ್ದೆ. ನನ್ನ ಈ ವಿಚಿತ್ರ ವರ್ತನೆಗಳ ಬಗ್ಗೆ ನನಗೇ ಜಿಗುಪ್ಸೆ ಮೂಡಿತ್ತು. 'ಛೇ! ಮಾನಸಿಕವಾಗಿ ಇಷ್ಟೊಂದು ದುರ್ಬಲನಾಗಿ ಬಿಟ್ಟೇನೆ?' ಎಂದು ಹೆದರಿಕೆಯೂ ಆಯಿತು.

ನನ್ನ ನುಡಿ, ನಡತೆಗಳಲ್ಲಿ ಹುಟ್ಟಿದ್ದ ಸಣ್ಣತನ ಕಂಡು ನಾಚಿಕೆ ಹುಟ್ಟಿತು. ಮತ್ತೆ ಸಹಜ ಮನುಷ್ಯನಾಗಲು ಕ್ಯಾಮೆರಾ ಹಿಡಿದು ಹೊರಹೋಗುವುದು ಒಂದರ್ಥದಲ್ಲಿ ಸರಿ ಎನಿಸಿತು. ಪುಸ್ತಕಗಳ ಓದು ಕೂಡ ಬೋರಾಗಿತ್ತು. ಹೀಗೆ ಇದ್ದರೆ ಹುಚ್ಚು ಹಿಡಿಯುವುದು ಗ್ಯಾರಂಟಿ ಎಂದರಿವಾಗಿ ತಡೆಯಲಾರದೆ ಎದ್ದು ಊರಿಗಂಟಿಕೊಂಡ ಚಿಕ್ಕಕೆರೆಗಳ ನೋಡಲು ಕಾಲುಕಿತ್ತೆ. ಪೊಲೀಸರ ಕಣ್ಣು ತಪ್ಪಿಸಿ ಅನೇಕ ಹಿತ್ತಲುಗಳ ಕಳ್ಳದಾರಿಯಲ್ಲೇ ನಡೆದೆ.

ಅಸಲಿಗೆ ಶಿವಮೊಗ್ಗ ಸುತ್ತಮುತ್ತ ಈಪಾಟಿ ಕೆರೆಗಳಿರುವ ಸಂಗತಿಯೇ ಗೊತ್ತಿರಲಿಲ್ಲ. ಎಷ್ಟೋ ಸಲ ಪಕ್ಷಿಗಳ ಹುಡುಕಿ ನಾವು ಎಲ್ಲಿಗೆಲ್ಲಿಗೋ ಹೋದರೆ ಆ ಹಕ್ಕಿಗಳು ನಮ್ಮೂರಿಗೇ ಬಂದು ನಮ್ಮ ಕಿವಿಯ ಸನಿಹದಲ್ಲೇ ಹಾಡುತ್ತಿರುತ್ತವೆ. ಇಂತದ್ದೆಲ್ಲಾ ನಾವು ಗಮನಿಸಿಯೇ ಇರುವುದಿಲ್ಲ. ಈ ಪರಿಯ ಸೂಕ್ಷ್ಮಗಳನ್ನು ಮೊದಲು ಲಕ್ಷ್ಯಗೊಟ್ಟು ನೋಡಬೇಕು, ಕಿವಿಗೊಟ್ಟು ಆಲಿಸಬೇಕು. ದಿನಾ ಸಂಜೆ ಇಲ್ಲವೇ ಬೆಳಗ್ಗೆ ಮನೆಯಲ್ಲಿರುವ ಬದಲು ಯಾವುದಾದರೂ ಒಂದು ಕೆರೆಯ ದಡಕ್ಕೆ ಹೋಗಿ ಸುಮ್ಮನೆ ಕಣ್ಣಗಲಿಸಿ ಕೂತು ಬಿಡಬೇಕು. ಆಗ ಪಕ್ಷಿಗಳ ಅನಿರೀಕ್ಷಿತ ನಲಿದಾಟಗಳನ್ನೂ ಗಮನಿಸಬಹುದು.

ಫೆಬ್ರುವರಿಯಿಂದ ಮಾರ್ಚ್ ತಿಂಗಳು ಹಕ್ಕಿ ನೋಡುಗರಿಗೆ ಸುಗ್ಗಿಕಾಲ. ಇದು ಉತ್ತರ ಭಾರತದ ಬಹಳಷ್ಟು ಪಕ್ಷಿಗಳು ದಕ್ಷಿಣಕ್ಕೆ ವಲಸೆ ಬರುವ ಸಮಯ. ಜತೆಗೆ ಇಲ್ಲಿನ ಸ್ಥಳೀಯ ಪಕ್ಷಿಗಳು ಗೂಡು ಕಟ್ಟುತ್ತಾ ಹೊಸ ಬಾಳುವೆ ಶುರು ಮಾಡುವ ವಸಂತಯೋಗ. ನಾ ತಲುಪಿದ ಆ ಕೆರೆ ನಿರ್ಜನವಾಗಿ ಹಚ್ಚ ಹಸಿರಾಗಿತ್ತು. ಹೋದ ವರುಷ ಈ ಕೆರೆ ಒಣಗಿತ್ತಂತೆ.